# ಮರಳಿ ಅರಳಿದ ಕರುಣ್




**ಬಲಗೈ ಬ್ಯಾಟ್ಸ್‌ಮನ್ ಕರುಣ್ ನಾಯರ್, ಎಂಟು ವರ್ಷಗಳ ಬಳಿಕ ಭಾರತದ ಟೆಸ್ಟ್ ತಂಡದಲ್ಲಿ ಮರಳಿ ಅವಕಾಶ ಗಳಿಸಿದ್ದಾರೆ. ತಾಳ್ಮೆಯ ಆಟ, ಸ್ಥಿರತೆ, ಫಿಟ್‌ನೆಸ್, ನಿರಂತರ ಅಭ್ಯಾಸ, ಪ್ರವಾಸಕ್ಕೆ ಅನುಗುಣವಾಗಿ ಆಯಾ ದೇಶಗಳಿಗೆ ಹೊಂದಿಕೊಂಡು ಆಡುವ ಕೌಶಲ ಎಲ್ಲವೂ ಕರುಣ್ ಬಳಿಯಿವೆ. ಅನೇಕ ಸೊಗಸಿನ ಇನಿಂಗ್ಸ್‌ಗಳು ಕರುಣ್ ಅವರ ಬ್ಯಾಟ್‌ನಿಂದ ಹೊರಹೊಮ್ಮಿವೆ.**

**■ ಪ್ರಮೋದ ಕುಲಕರ್ಣಿ**

ಸುರಂಗದಲ್ಲಿ ಹಾದು ಹೋಗುವಾಗ ಎಷ್ಟೇ ಕತ್ತಲಿದ್ದರೂ ಅದರ ಅಂತ್ಯದಲ್ಲಿ ಬೆಳಕು ಇದ್ದೇ ಇರುತ್ತದೆ. ಅದು ಮತ್ತೊಂದು ಸಾಧನೆಗೆ ಭರವಸೆಯಾಗುತ್ತದೆ ಎನ್ನುವ ಮಾತು ಕರ್ನಾಟಕದ ಕ್ರಿಕೆಟಿಗ ಕರುಣ್ ನಾಯರ್ ಪಾಲಿಗೆ ಅಕ್ಷರಶಃ ಸತ್ಯವಾಗಿದೆ.

ಒಮ್ಮೆ ರಾಷ್ಟ್ರೀಯ ತಂಡದಲ್ಲಿ ಆಡುವ ಅವಕಾಶ ಪಡೆದು ಹಲವು ದಾಖಲೆಗಳನ್ನು ಮಾಡಿಯೂ ತಂಡದಲ್ಲಿ ಸ್ಥಾನ ಕಳೆದುಕೊಂಡ ಬಲಗೈ ಬ್ಯಾಟ್ಸ್‌ಮನ್ ಕರುಣ್ ಎಂಟು ವರ್ಷಗಳ ಬಳಿಕ ಭಾರತದ ಟೆಸ್ಟ್ ತಂಡದಲ್ಲಿ ಮರಳಿ ಅವಕಾಶ ಗಳಿಸಿದ್ದಾರೆ. ಇಂಗ್ಲೆಂಡ್ ಪ್ರವಾಸದಲ್ಲಿರುವ ಭಾರತ ತಂಡ ಐದು ಪಂದ್ಯಗಳ ಟೆಸ್ಟ್ ಸರಣಿ ಆಡುತ್ತಿದ್ದು, ಮೊದಲ ಟೆಸ್ಟ್‌ನಲ್ಲಿ ಆಡುವ ಅಂತಿಮ ಹನ್ನೊಂದರ ಬಳಗದಲ್ಲಿಯೂ ಕಾಣಿಸಿಕೊಂಡಿದ್ದಾರೆ.

ಮೂಲತಃ ಕೇರಳದ ಕರುಣ್ ನಾಯರ್ ರಾಜಸ್ಥಾನದ ಜೋಧಪುರದಲ್ಲಿ ಹುಟ್ಟಿ ತಮ್ಮ ಕ್ರಿಕೆಟ್ ಭವಿಷ್ಯ ರೂಪಿಸಿಕೊಳ್ಳಲು ಕರ್ನಾಟಕ ತಂಡವನ್ನು ಆಯ್ಕೆ ಮಾಡಿಕೊಂಡರು. ಕರುಣ್ ತಂದೆ ಕಲಾಧರನ್ ನಾಯರ್ ಖಾಸಗಿ ಕಂಪನಿಯಲ್ಲಿ ಮೆಕಾನಿಕಲ್ ಎಂಜಿನಿಯರ್ ಆಗಿದ್ದರಿಂದ ವರ್ಗಾವಣೆಯಾಗಿ ಬೆಂಗಳೂರಿಗೆ ಬಂದರು. ಇದು ಕೂಡ ರಾಜ್ಯದಲ್ಲಿ ಹೊಸ ಪ್ರತಿಭೆಯ ಉದಯಕ್ಕೆ ಕಾರಣವಾಯಿತು.

### ರಣಜಿ ಟೂರ್ನಿಯ ಹೀರೊ

14 ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಕರ್ನಾಟಕ ತಂಡ 2013–14ನೇ ಋತುವಿನಲ್ಲಿ ರಣಜಿ ಚಾಂಪಿಯನ್ ಆಗಿತ್ತು. ವಿಶೇಷವೆಂದರೆ ಅದೇ ವರ್ಷ ಕರುಣ್ ನಾಯರ್ ಮೊದಲ ಬಾರಿಗೆ ರಾಜ್ಯ ರಣಜಿ ತಂಡದಲ್ಲಿ ಅವಕಾಶ ಪಡೆದಿದ್ದರು. ಪ್ರಮುಖ ಪಂದ್ಯಗಳಲ್ಲಿ ಸತತ ಮೂರು ಶತಕಗಳನ್ನು ಬಾರಿಸಿ ತಂಡ ಟ್ರೋಫಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮರುವರ್ಷದಲ್ಲಿ ಲೀಗ್ ಹಂತದ ಪಂದ್ಯಗಳಲ್ಲಿ ನಿರೀಕ್ಷೆಯಷ್ಟು ಪ್ರದರ್ಶನ ತೋರಿಸದಿದ್ದರೂ ಫೈನಲ್‌ನಲ್ಲಿ ತ್ರಿಶತಕ ಬಾರಿಸಿ ಕರ್ನಾಟಕ ತಂಡ ಸತತ ಎರಡನೇ ಬಾರಿಗೆ ರಣಜಿ ಗೆಲ್ಲಲು ಕಾರಣರಾದರು. 1946–47ರ ಬಳಿಕ ರಣಜಿ ಫೈನಲ್‌ನಲ್ಲಿ ತ್ರಿಶತಕ ಬಾರಿಸಿದ ಮೊದಲ ಆಟಗಾರ ಮತ್ತು ರಣಜಿಯಲ್ಲಿ ತ್ರಿಶತಕ ಸಿಡಿಸಿದ ಕರ್ನಾಟಕದ ಎರಡನೇ ಆಟಗಾರ (ಮೊದಲು ಕೆ.ಎಲ್. ರಾಹುಲ್) ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು. 2015–16ರ ರಣಜಿಯಲ್ಲಿಯೂ ಕರುಣ್ ನಾಯರ್ ಬ್ಯಾಟಿಂಗ್ ಅಬ್ಬರ ಮುಂದುವರಿಯಿತು.

ಇವು ಕೆಲವು ಉದಾಹರಣೆಗಳಷ್ಟೇ.